# ರೈತನ ಚಾತುರ್ಯ



ಒಂದಾನೊಂದು ಕಾಲದಲ್ಲಿ ಓರ್ವ ರಾಜನಿದ್ದ. ಇಡೀ ರಾಜ್ಯದಲ್ಲಿ ತಾನೇ ಅತ್ಯಂತ ಬುದ್ಧಿವಂತ ಎಂದು ಆತ ಭಾವಿಸಿದ್ದ. ತನ್ನ ಬುದ್ಧಿ ಚಾತುರ್ಯವನ್ನು ಮೀರಿಸುವವರು ಈ ರಾಜ್ಯದಲ್ಲಿ ಯಾರೊಬ್ಬರೂ ಇಲ್ಲ ಎಂದು ಅವನು ಹೆಮ್ಮೆ ತಾಳಿದ್ದ. ಒಮ್ಮೆ ಆತ ಒಂದು ಯೋಜನೆ ರೂಪಿಸಿದ. ಯಾರು ತನಗೆ ಅಪ್ಪಟ ಸುಳ್ಳಿನ ಕತೆಯೊಂದನ್ನು ಹೇಳುತ್ತಾರೋ ಅವರಿಗೆ ಅರ್ಧ ರಾಜ್ಯ ಉಡುಗೊರೆ ನೀಡುವುದಾಗಿ ಘೋಷಿಸಿದ.

ಕುರುಬನೊಬ್ಬ ತನ್ನ ಅದೃಷ್ಟ ಪರೀಕ್ಷಿಸಲು ಕಥೆ ಹೇಳಲೆಂದು ಅರಮನೆಗೆ ಬಂದ.

ಕುರುಬ ಕಥೆ ಶುರು ಮಾಡಿದ. 'ಮಹಾಪ್ರಭು ನನ್ನ ಮುತ್ತಜ್ಜನ ಬಳಿ ಕುರಿ ಮೇಯಿಸುವ ಸಂದರ್ಭದಲ್ಲಿ ಒಂದು ಉದ್ದವಾದ ಕೋಲಿದ್ದಿತು. ಅದರಿಂದ ಆತ ಬಾನಿನಲ್ಲಿ ಮಿನುಗುತ್ತಿರುವ ನಕ್ಷತ್ರಗಳನ್ನು ಸ್ಪರ್ಶಿಸಿ ಲೆಕ್ಕ ಹಾಕುತ್ತಿದ್ದ' ಎಂದ.

ಆಗ ರಾಜ 'ಅದು ಸಾಧ್ಯವೇ ಇಲ್ಲ. ನಿನ್ನ ಮುತ್ತಜ್ಜ ಏನು ಮಹಾ? ನನ್ನ ಅಜ್ಜನ ಬಳಿ ಹೊಗೆಬತ್ತಿ ಸೇದುವ ದೊಡ್ಡ ಪೈಪು ಇದ್ದಿತು. ಆತ ಸೂರ್ಯನನ್ನು ಸ್ಪರ್ಶಿಸಿ ಸೂರ್ಯನಿಂದಲೇ ತನ್ನ ಪೈಪ್‌ಗೆ ಬೆಂಕಿ ಹಚ್ಚಿಕೊಳ್ಳುತ್ತಿದ್ದ.'

ಕುರುಬ ತನ್ನ ಸೋಲೊಪ್ಪಿಕೊಂಡು ಪೆಚ್ಚಾಗಿ ಅಲ್ಲಿಂದ ನಿರ್ಗಮಿಸಿದ.

ಅನಂತರ ಒಬ್ಬ ಸಿಂಪಿಗ ಅರಮನೆಗೆ ಬಂದು ರಾಜನಿಗೆ ಕಥೆ ಹೇಳಲು ಆರಂಬಿಸಿದ.

'ಮಹಾಪ್ರಭು, ಇವತ್ತು ಬೆಳಿಗ್ಗೆ ಪ್ರಚಂಡ ಮಳೆ ಸುರಿಯಿತು. ಭಾರೀ ಗುಡುಗು ಸಿಡಲು ಮಿಂಚಿನ ಆರ್ಭಟ ಬಾನಿನಲ್ಲಿ ವ್ಯಕ್ತವಾಯಿತು. ಬಾನಿನ ನಡುವೆ ದೊಡ್ಡ ತೂತು ಕಾಣಿಸಿಕೊಂಡಿತು. ಅದರಿಂದ ಮಳೆ ನೀರು ಸುರಿಯಹತ್ತಿತು.

ನಾನು ಬೆಳಿಗ್ಗೆ ಇಡೀ ಕುಳಿತು ಅದನ್ನು ಹೊಲಿದು ಸರಿಪಡಿಸಿದೆ.'

ತಕ್ಷಣ ರಾಜ ಉತ್ತರಿಸಿದ 'ನೀನು ಬಾನಿನ ತೂತನ್ನು ಸರಿಯಾಗಿ ಹೊಲಿದಿಲ್ಲ ಅನಿಸುತ್ತದೆ. ಕೇವಲ ಹತ್ತು ನಿಮಿಷಗಳ ಹಿಂದೆ ಮತ್ತೆ ಮಳೆ ಸುರಿಯಲು ಆರಂಭವಾಯಿತು.'

ಸಿಂಪಿಗನೂ ತನ್ನ ಸೋಲೊಪ್ಪಿಕೊಂಡು ಅಲ್ಲಿಂದ ನಿರ್ಗಮಿಸಿದ. ಅನಂತರ ರೈತನೊಬ್ಬ ಕಥೆ ಹೇಳುವ ಉದ್ದೇಶದಿಂದ ಅರಮನೆಗೆ ಬಂದ. ರೈತ ತುಂಬಾ ಚಾಣಾಕ್ಷನಾಗಿದ್ದ. ರಾಜನಿಗೆ ಬುದ್ಧಿ ಕಲಿಸಲೇಬೇಕೆಂದು ಆತ ನಿರ್ಧರಿಸಿದ.

'ಮಹಾಪ್ರಭು, ಎರಡು ದಿನಗಳ ಹಿಂದೆ ನೀವು ನನ್ನ ಗುಡಿಸಲಿನ ಮುಂದೆ ಹಾದು ಹೋಗುತ್ತಿದ್ದಿರಿ. ಆಗ ನೀವು ನನ್ನಿಂದ ನಾಲ್ಕು ಚೀಲ ಭರ್ತಿ ಚಿನ್ನದ ನಾಣ್ಯಗಳನ್ನು ಸಾಲ ಪಡೆದಿರುವಿರಿ. ಅದನ್ನು ದಯವಿಟ್ಟು ನನಗೆ ಹಿಂತಿರುಗಿಸಿರಿ' ಎಂದ.

ರೈತನ ಅಪ್ಪಟ ಸುಳ್ಳಿನ ಕಥೆ ಹೇಳಿ ರಾಜ ಸಿಟ್ಟಿಗೆದ್ದ. 'ಏನಿದು? ನಿನ್ನಂತಹ ದಟ್ಟ ದರಿದ್ರನಿಂದ ನಾನು ಚಿನ್ನದ ನಾಣ್ಯ ಸಾಲ ಪಡೆದಿರುವೆನೇ ಇದು ಅಪ್ಪಟ ಸುಳ್ಳು' ಎಂದು ಕಿರುಚಿದ.

'ಮಹಾಪ್ರಭು, ನನ್ನ ಕಥೆ ಸುಳ್ಳಾದರೆ ನನಗೆ ಅರ್ಧ ರಾಜ್ಯವನ್ನು ಅನುಗ್ರಹಿಸಿ' ಎಂದು ರೈತ ಮುಗುಳ್ನಗುತ್ತ.

ತಾನು ಸಿಕ್ಕಿ ಬಿದ್ದೆನೆಂಬುದು ರಾಜನಿಗೆ ಗೊತ್ತಾಯಿತು. ಆತ ರೈತನಿಗೆ ನಾಲ್ಕು ಚೀಲ ಭರ್ತಿ ಚಿನ್ನದ ನಾಣ್ಯಗಳನ್ನು ನೀಡಿದ. ಅರ್ಧ ರಾಜ್ಯ ನೀಡುವುದಕ್ಕಿಂತ ಅದು ಉತ್ತಮ ಎಂದು ರಾಜನಿಗೆ ಅನಿಸಿತು. ತನ್ನ ಮೂರ್ಖತನಕ್ಕೆ ರಾಜನಿಗೆ ನಾಚಿಕೆಯಾಯಿತು.

**-ಶಿವರಾಮ ಭಟ್, ಹತ್ತೊಕ್ಕಲು, ಉಪ್ಪಿನಂಗಡಿ**

# ಪುಟ್ಟನ ಕುತೂಹಲ



ಅಮ್ಮ ಅಮ್ಮ ಅಮ್ಮ
ಕಾಡುವುದು ನನಗೊಮ್ಮೆ
ಒಂದೇ ಒಂದು ಪ್ರಶ್ನೆ
ಉತ್ತರ ಕೊಡಬೇಕು ನೀನೆ

ಅಪ್ಪನಿಗೇಕೆ ಸಿಟ್ಟು
ತಂಗಿಗೇಕೆ ಅಳುವು
ಮಿಸ್ಸಿಗೇಕೆ ಜ್ಞಾನ!
ಮನಸ್ಸಲ್ಲೇಕೆ ಹೊಳವು

ನಾಯಿಗೇಕೆ ದನಿಯಿಲ್ಲ
ಚಿಟ್ಟೆಯೇಕೆ ಹಾರುವುದು
ಗಿಳಿಗೇಕೆ ಹಸಿರು ಬಣ್ಣ
ಬಾನು ನೀಲೇಕೆ ತೋರುವುದು

ಅವರದೇಕೆ ದೊಡ್ಡ ಮನೆ
ನಮ್ಮದೇಕೆ ಚಿಕ್ಕ ಮನೆ
ಜೋಳಗಳಿಗೇಕೆ ತೆನೆ
ಮುಳ್ಳಿಗೇಕೆ ಮೊನೆ

ಮೋಡದಲ್ಲಿ ನೀರು ಹೇಗೆ
ಸೋರುವುದು ಎಲ್ಲಿಂದ
ಭಾನು ಚಂದ್ರರು ಹೇಗೆ
ತಾರೆಗಳು ಮಿಂಚುವುದೇಕೆ

ಸಾಗರದಲ್ಲಿ ಉಪ್ಪೇಕೆ
ಹೂವಿನಲ್ಲಿ ಕಂಪೇಕೆ
ಹಣ್ಣಿನಲ್ಲಿ ರಸ ಹೇಗೆ
ಭೂಮಿ ಕಂಪನ ಹೇಗೆ

ಅಮ್ಮ ಕೇಳಿ ನಕ್ಕಳು
ಬಿಡಿಸಿ ತಾನೆ ಹೇಳಿದಳು
'ಬೇಗ ನೀನು ದೊಡ್ಡವನಾಗು
ಎಲ್ಲ ತಿಳಿವುದು' ಎಂದಳು

**ಎಂ.ಜಿ.ದೇಶಪಾಂಡೆ**